# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22 ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-73 ರಂತೆ ರಾಜ್ಯದ 16 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣಕ್ಕೆ ಪ್ರಸಕ್ತ ಸಾಲಿನಲ್ಲಿ ಎರಡು ಕೋಟಿ ರೂ. ಅನುದಾನವನ್ನು ಒದಗಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: DoF-TECHO-FYP1/29/2021, ದಿನಾಂಕ: 05-04-2021 ಮತ್ತು 17-05-2021.

2704860
30 JUN 2021

******

**ಪ್ರಸ್ತಾವನೆ:**

ರಾಜ್ಯ ಸರ್ಕಾರವು 2021-22ನೇ ಸಾಲಿನಲ್ಲಿ ಆಯವ್ಯಯ ಭಾಷಣದ ಕಂಡಿಕೆ-73 ರಲ್ಲಿ ರಾಜ್ಯದ 16 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ ಯೋಜನೆಯನ್ನು ಎರಡು ಕೋಟಿ ರೂ.ಗಳ ಅನುದಾನದಲ್ಲಿ ಜಾರಿಗೆ ತರಲಾಗುವುದು ಎಂದು ಘೋಷಿಸಲಾಗಿದೆ. ಸದರಿ ಯೋಜನೆಯಡಿ ಆಧುನಿಕ ಮೀನುಗಾರಿಕೆ ತಾಂತ್ರಿಕತೆಗಳನ್ನು ಅಳವಡಿಸಿ ರಾಜ್ಯದ 16 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಗೆ 2021-22ನೇ ಸಾಲಿನಲ್ಲಿ ರೂ 200.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರಗಳಲ್ಲಿ, ರಾಜ್ಯವು ಒಟ್ಟು 5.60 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣದ ಒಳನಾಡು ಜಲಸಂಪನ್ಮೂಲ ಹೊಂದಿದ್ದು, ಇದರಲ್ಲಿ 2.67 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 82 ಜಲಾಶಯಗಳು, 1.72 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 3799 ದೊಡ್ಡ ಕೆರೆಗಳು, 1.21 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 22624 ಗ್ರಾಮ ಪಂಚಾಯತ್ ಕೆರೆಗಳು ಹಾಗೂ 5813 ಕಿ.ಮೀ.ಗಳಷ್ಟು ಉದ್ದದ ನದಿಗಳು ಸೇರಿವೆ. ಈ ಜಲಸಂಪನ್ಮೂಲಗಳು ಮೀನು ಉತ್ಪಾದನೆಗೆ ವಿಪುಲ ಅವಕಾಶವನ್ನು ಒದಗಿಸಿವೆ. ಈ ಜಲಸಂಪನ್ಮೂಲ ಗಳಿಂದ ವಾರ್ಷಿಕ ಸುಮಾರು 4.00 ಲಕ್ಷ ಮೆಟ್ರಿಕ್ ಟನ್ ಮೀನು ಉತ್ಪಾದಿಸ ಬಹುದಾಗಿರುತ್ತದೆ.

ರಾಜ್ಯದಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳಲ್ಲಿ ಶೀಘ್ರವಾಗಿ ಬೆಳೆಯುವ ತಳಿಗಳ ಮೀನುಮರಿಗಳನ್ನು ದಾಸ್ತಾನು ಮಾಡುವ ಮೂಲಕ ಆರಂಭದಿಂದಲೂ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು ಮೀನುಗಾರಿಕೆ ಇಲಾಖೆ ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ. ಮೀನಿನ ಉತ್ಪಾದನೆಯನ್ನು ಹೆಚ್ಚಿಸಲು ಗುಣಮಟ್ಟದ ಮೀನುಮರಿಗಳು ಅವಶ್ಯವಿದ್ದು, ಅವುಗಳಿಗೆ ಬೇಡಿಕೆ ನಿರಂತರವಾಗಿ ಹೆಚ್ಚುತ್ತಿದೆ. ರಾಜ್ಯದಲ್ಲಿ 1960 ರಿಂದ ಪ್ರಮುಖ ಮೀನುಮರಿ ಉತ್ಪಾದನಾ ಕೇಂದ್ರಗಳ ಸ್ಥಾಪನೆ ಆರಂಭಿಸಲಾಗಿ ಮೀನುಮರಿಗಳ ಉತ್ಪಾದನೆಯು ಸರ್ಕಾರಿ ಸ್ವಾಮ್ಯದ ಕೇಂದ್ರಗಳಲ್ಲಿ ಕೇಂದ್ರೀಕೃತವಾಗಿದೆ.

Kamakshi U.A.

ಪ್ರಸ್ತುತ ರಾಜ್ಯದ ಒಳನಾಡು ಉತ್ಪಾದನೆ ಸುಮಾರು 1.5 ಲಕ್ಷ ಟನ್ ನಿಂದ 2.00 ಲಕ್ಷ ಟನ್‌ಗಳಷ್ಟಿದ್ದು, ಇದನ್ನು ಗಣನೀಯವಾಗಿ ಹೆಚ್ಚಿಸುವ ಅಗತ್ಯವಿದ್ದು, ಇದಕ್ಕೆ ಪೂರಕವಾಗಿ ಉತ್ತಮ ಗುಣಮಟ್ಟದ ಮೀನುಮರಿಗಳ ಉತ್ಪಾದನೆಯನ್ನು ದ್ವಿಗುಣಗೊಳಿಸಬೇಕಿದೆ. ಮುಖ್ಯವಾಗಿ ಗುಣಮಟ್ಟದ ಮೀನುಮರಿ ಉತ್ಪಾದನೆಯನ್ನು ಹೆಚ್ಚಿಸಲು ಹಲವು ಸವಾಲುಗಳಿದ್ದು, ತಾಜಾ ಮೀನುಮರಿ ಬ್ರೂಡ್ ಸ್ಟಾಕ್ ಸುಧಾರಣೆ ಮತ್ತು ತಳಿ ವೈವಿಧ್ಯತೆ, ಆಧುನಿಕ ತಂತ್ರಜ್ಞಾನ ಬಳಕೆಯ ಕುರಿತಾಗಿರುತ್ತದೆ.

ಉತ್ತಮ ಗುಣಮಟ್ಟದ ಮೀನುಮರಿಗಳ ಉತ್ಪದನೆ ಹೆಚ್ಚಿಸಲು ತಾಯಿ ಮೀನನ್ನು ನಿಯಮಿತವಾಗಿ ಬದಲಾಯಿಸುವುದು ಅಗತ್ಯವಾಗಿದೆ. ಇದಕ್ಕಾಗಿ ಪ್ರಸ್ತುತ ಮೀನುಮರಿ ಕೇಂದ್ರದಲ್ಲಿ ಅಂತಿಮ ಹಂತದಲ್ಲಿ ಉಳಿಯುವ ಮೀನುಮರಿಗಳಿಂದ ಆರಿಸಿ ಬೆಳೆಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ತಾಯಿ ಮೀನುಗಳ ಗುಣಮಟ್ಟ ಕಡಿಮೆಯಾಗಿ ವಂಶಿಕವಾಗಿ ಮೀನಿನ ಬೆಳವಣಿಗೆ ಕುಂಠಿತವಾಗುವ ಸಾಧ್ಯತೆ (inbreeding suppression ) ಅಧಿಕವಾಗಿರುತ್ತದೆ.

ತಾಯಿ ಮೀನಿನ ಗುಣಮಟ್ಟ ಅಂದರೆ ಆರೋಗ್ಯ, ವಯಸ್ಸು ಮತ್ತು ವಂಶಾವಳಿ ಮೀನುಮರಿಯ ಗುಣದ ಮೇಲೆ ಮಹತ್ತರವಾದ ಸಂಬಂಧವನ್ನು ಹೊಂದಿದೆ. ಗುಣಮಟ್ಟವಿಲ್ಲದ ಮೀನುಮರಿಗಳ ಸಾಕಾಣಿಕೆಯಿಂದ ಮೀನುಮರಿಗಳಲ್ಲಿ ರೋಗಬಾಧೆ ಮತ್ತು ಕುಂಠಿತ ಬೆಳವಣಿಗೆಯಿಂದಾಗಿ ರೈತರಿಗೆ ನಿರೀಕ್ಷಿತ ಮೊತ್ತದಲ್ಲಿ ಆದಾಯ ಸಿಗುತ್ತಿಲ್ಲ. ಆದ್ದರಿಂದ ಮೀನಿನ ಮರಿಗಳ ಉತ್ಪಾದನೆಯ ಗುಣಮಟ್ಟ ಮತ್ತು ಪ್ರಮಾಣವನ್ನು ಸುಧಾರಿಸಬೇಕಾದ ಅಗತ್ಯವಿದೆ.

ಆದ್ದರಿಂದ, ಗುಣಮಟ್ಟದ ಮೀನು ಮರಿಗಳನ್ನು ಉತ್ಪಾದಿಸಲು ಅಗತ್ಯ ವಿರುವ ಕ್ರಮಗಳನ್ನು ತಕ್ಷಣದಿಂದ ಪ್ರಾರಂಭಿಸಬೇಕಿದೆ. ಇದಕ್ಕಾಗಿ ಅಗತ್ಯವಿರುವ ತಾಯಿ ಮೀನುಗಳನ್ನು ಹೊರಗಿನ ಮೂಲಗಳಿಂದ ಸಂಗ್ರಹಿಸಲಾಗುವುದು. ಉತ್ತಮ ಗುಣ ಮಟ್ಟದ ಮರಿಗಳನ್ನು ಉತ್ಪಾದಿಸಲು ಅನುವಂಶಿಕವಾಗಿ ವೈವಿಧ್ಯತೆಯುಳ್ಳ ತಳಿ ತಾಯಿ ಮೀನುಗಳ ನಿರ್ವಹಣೆ ಅತ್ಯಗತ್ಯ. ತಳಿ ತಾಯಿ ಮೀನುಗಳನ್ನು ಅದೇ ಕೇಂದ್ರದಲ್ಲಿ ಉತ್ಪಾದಿಸುವ ಮೀನುಮರಿಗಳಿಂದ ಬೆಳೆಸುವ ಬದಲು ವಿವಿಧ ಮೂಲಗಳಿಂದ ಅಂದರೆ ಬೇರೆ ರಾಜ್ಯಗಳಿಂದ/ ಜಲಾಶಯ/ ಕೆರೆಗಳಿಂದ ಸಂಗ್ರಹಿಸುವುದು ಹಾಗೂ ಅಧಿಕೃತ ತಾಯಿ ಮೀನು ನಿರ್ವಹಣಾ ಕೇಂದ್ರದಿಂದ (Recognised brood bank) ಖರೀದಿಸುವುದು ಹಾಗೂ ವೈಜ್ಞಾನಿಕ ವಿಧಾನದಿಂದ ಉತ್ತಮ ಪೋಷಣೆ ನೀಡಿ ತಳಿ ತಾಯಿ ಮೀನು ಅಭಿವೃದ್ಧಿಗೊಳಿಸುವುದರಿಂದ ಉತ್ತಮ ಗುಣಮಟ್ಟದ ಹಾಗೂ ಪ್ರಮಾಣದ ಮೀನುಮರಿಗಳನ್ನು ಉತ್ಪಾದಿಸುವ ಮೂಲಕ ಒಳನಾಡು ಮೀನು ಉತ್ಪಾದನೆ ಹೆಚ್ಚಿಸಬಹುದಾಗಿದೆ. ಈ ಯೋಜನೆಯಡಿ ಮೀನು ಮರಿ ಉತ್ಪಾದನೆ ಕೇಂದ್ರಗಳ ಅವಶ್ಯಕತೆ ಹಾಗೂ ಲಭ್ಯವಿರುವ ಸೌಕರ್ಯಗಳ ಅನುಗುಣವಾಗಿ ಈ ಕೆಳಗಿನ ಅಂಶಗಳನ್ನು ಮೀನುಮರಿ ಉತ್ಪಾದನ ಕೇಂದ್ರಗಳಲ್ಲಿ ಹಾಗೂ ಇತರೆ ಜಲಸಂಪನ್ಮೂಲಗಳಲ್ಲಿ ಅಳವಡಿಸಲಾಗುವುದು ಎಂದು ತಿಳಿಸಿರುತ್ತಾರೆ.

1. **<u>ತಳಿ ಮೀನುಮರಿಗಳ ಸಂವರ್ಧನೆ.</u>**

a. ಭಾರತೀಯ ದೊಡ್ಡಗೆಂಡೆ ಮೀನುಗಳನ್ನು ಸ್ಥಳೀಯವಾಗಿಯೇ ಇರುವ ಒರಿಸ್ಸಾ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಅಸ್ಸಾಂ, ಮಹಾರಾಷ್ಟ್ರ, ಗುಜರಾತ್ ಈ 6 ರಾಜ್ಯಗಳಿಂದ ಅಲ್ಲದೇ NFDB ಅಭಿವೃದ್ಧಿ ಪಡಿಸಿದ Brood

Kamakshi U.A

Bank ಗಳಿಂದ ಮೀನುಮರಿ (Fish spawn)ಗಳನ್ನು ಖರೀದಿಸಿ, ಬೆಳಸಿ ರಾಜ್ಯದಲ್ಲಿ ಹೊಸ ತಾಯಿ ಮೀನಿನ ತಳಿ ಸಂಗ್ರಹ ಕೇಂದ್ರ( Brood Bunk) ವನ್ನು ರಚಿಸಲಾಗುವುದು ಹಾಗೂ ಅದಕ್ಕೆ ಅಗತ್ಯವಿರುವ ಉಪಕರಣ/ ಸಲಕರಣೆಗಳನ್ನು ಖರೀದಿಸುವುದು.

b. ಅಲ್ಲದೆ, ತಳಿ ವೈವಿಧ್ಯವನ್ನು ಹೆಚ್ಚಿಸಲು ರಾಜ್ಯದ ಜಲಾಶಯ/ವಿವಿಧ ನದಿ ಮತ್ತು ಬೇರೆ ರಾಜ್ಯಗಳಿಂದ ತಾಯಿ ಮೀನುಗಳನ್ನು ಸಂಗ್ರಹಿಸಲಾಗುವುದು.

2. **<u>ಮೀನುಮರಿ ಉತ್ಪಾಧನಾ/ಪಾಲನಾ ಕೇಂದ್ರಗಳ ಆಧುನಿಕರಣ</u>**

a. ಸ್ವಳಾವಕಾಶದ ಸಮರ್ಪಕ ಬಳಕೆಗಾಗಿ ದಾಸ್ತಾನು ಸಾಂದ್ರತೆಯನ್ನು ಹೆಚ್ಚಿಸಲು ಮೀನುಕೊಳಗಳಲ್ಲಿ ಏರೇಟರ್, ಡಿಫ್ಯೂಸರ್ ಮತ್ತು ಬ್ಲೋವರ್ ಮುಂತಾದ ಉಪಕರಣಗಳನ್ನು ಬಳಸಲಾಗುವುದು.

b. ತಾಯಿ ಮೀನು ಮತ್ತು ಮೀನು ಪಾಲನಾ ಕೊಳಗಳ ಪ್ರಮಾಣ (pond depth/rearing volume) ಹೆಚ್ಚಿಸಲು ಆಧುನಿಕ ಯಂತ್ರಗಳನ್ನು ಖರೀದಿಸಲಾಗುವುದು.

c. ತಾಯಿ ಮೀನಿನ ಆರೋಗ್ಯ ಹಾಗು ಅವುಗಳ ಗುಣಮಟ್ಟ ಸುಧಾರಿಸಲು ಉತ್ತಮ ಗುಣಮಟ್ಟದ ಸ್ಥಳೀಯ ಮೀನು ಮೇವು, ತಯಾರಿಸಲು ಫೀಡ್ ಎಕ್ಸ್ ಟ್ರೂಡರ್ ಗಳು, ಪಲ್ವರೈಸರ್, ಬಾಯ್ಲರ್ ಮತ್ತು ಡ್ರೈಯರ್ ಗಳನ್ನು ಉತ್ಪಾದನ ಕೇಂದ್ರಗಳಲ್ಲಿ ಖರೀದಿಸಲಾಗುವುದು.

3. **<u>ಆಧುನಿಕ ಮೀನುಮರಿ ಪಾಲನಾ ತಂತ್ರಜ್ಞಾನಗಳನ್ನು ಅಳವಡಿಸುವುದು.</u>**

ಮೀನುಮರಿ ಉತ್ಪಾದನ ಪ್ರದೇಶವನ್ನು ವಿಸ್ತರಿಸಲು ಮತ್ತು ಮೀನು ಮರಿಗಳ ಗುಣಮಟ್ಟವನ್ನು ಹೆಚ್ಚಿಸಲು ಹ್ಯಾಚರಿಗಳ ನಿರ್ಮಾಣ, ಪೋರ್ಟೆಬಲ್ ಹ್ಯಾಚರಿಗಳ ಖರೀದಿ, ಆಧುನಿಕ ತಂತ್ರಜ್ಞಾನದ ನಿಯಂತ್ರಿತ ಒಳಾಂಗಣ ಪಾಲನಾ ಸೌಲಭ್ಯಗಳನ್ನು ಒದಗಿಸುವುದು, ಮೀನುಮರಿಗಳ ಬದುಕುಳಿಯುವಿಕೆ ಪ್ರಮಾಣವನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನದ ಪಾಲನಾ ಸೌಲಭ್ಯಗಳನ್ನು ನಿರ್ಮಿಸಲಾಗುವುದು. ಅಲ್ಲದೆ ಪಾಲನಾ ಪ್ರದೇಶವನ್ನು ವಿಸ್ತರಿಸಲು ಮೀನು ಉತ್ಪಾದನೆ ಸಾಮರ್ಥ್ಯವಿರುವ ಜಲಾಶಯಗಳನ್ನು ಆಯ್ಕೆ ಮಾಡಿ, ಜಲಾಶಯಗಳಲ್ಲಿ Pen ಹಾಗೂ ಅಂಚಿನಲ್ಲಿ ಪಾಲನಾ ಕೊಳಗಳನ್ನು ನಿರ್ಮಿಸಲಾಗುವುದು.

Kamakshi U.A

ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು ಮತ್ತು ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳ ನೇತೃತ್ವದ ಸಮಿತಿಯು ಮೀನುಮರಿ ಉತ್ಪಾದನಾ ಕೇಂದ್ರಗಳ ಅವಶ್ಯಕತೆಗೆ ಅನುಗುಣವಾಗಿ ಬೇಕಾಗಿರುವ ಸೌಲಭ್ಯಗಳನ್ನು ಅಂತಿಮಗೊಳಿಸಲಾಗುವುದು. ಈ ಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ನಿಸ್ಸಂದೇಹವಾಗಿ ಮೀನಮರಿ ಉತ್ಪಾದನೆಯನ್ನು ಮೀನುಗಾರಿಕಾ ವಲಯವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದು, 2021-22ನೇ ಸಾಲಿನಲ್ಲಿ "ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ ಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಆದ್ದರಿಂದ, ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ರಾಜ್ಯದ ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ ಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು "ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ" ಎಂಬ ಯೋಜನೆಯಡಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ ಇ-159 ಮೀಇಯೋ 2021, ಬೆಂಗಳೂರು</u>**
**<u>ದಿನಾಂಕ: 30-06-2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-73 ರಲ್ಲಿ ಘೋಷಿಸಿರುವ ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ರಾಜ್ಯದ ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ ಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು ಲೆಕ್ಕ ಶೀರ್ಷಿಕೆ 2405-00-101-0-03-106/059 ರಡಿ ಲಭ್ಯವಿರುವ ರೂ.2.00 ಕೋಟಿ (ಎರಡು ಕೋಟಿ ರೂಪಾಯಿಗಳು ಮಾತ್ರ)ಗಳ ಅನುದಾನದ ಮಿತಿಯೊಳಗೆ ಭರಿಸುವ ಷರತ್ತಿಗೊಳಪಟ್ಟು "ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ" ಯೋಜನೆಯಡಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

Kamakshi U.A

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಪಿಎಫ್‌ಓ /6/2021, ದಿನಾಂಕ: 20-04-2021 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/177/ವೆಚ್ಚ-4/2021 ದಿನಾಂಕ: 15-06-2021 ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 30/6/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

30/06/2021

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.